## ವಾರ್ತಾ ವಿಶ್ಲೇಷಣೆ

## ಚೀನಾದಲ್ಲಿ ಭಾರತೀಯ ವೈದ್ಯಕೀಯ ವಿದ್ಯಾರ್ಥಿಗಳು

ಚೀನಾದೇಶವು ನಮ್ಮ ಮಾರುಕಟ್ಟೆಗಳನ್ನು ಆಕ್ರಮಿಸಿಬಿಟ್ಟಿದೆ ಎನ್ನಲಾಗಿದೆ. ಅಲ್ಲಿನ ರೇಷ್ಮೆ ಮತ್ತು ಗ್ರಾಹಕ ಪದಾರ್ಥಗಳ ಗುಣಮಟ್ಟ ಚೆನ್ನಾಗಿರುವುದು ಮಾತ್ರವಲ್ಲ, ಅವು ಅಗ್ಗವೂ ಕೂಡ. ಈಗ ಭಾರತಕ್ಕಿಂದೇ ವಿಶೇಷವಾಗಿ ಮಾನವಸಂಪನ್ಮೂಲವನ್ನೂ ಚೀನಾ ದೇಶ ಅಗ್ಗವಾಗಿ ತನ್ನ ಪ್ರಯೋಗ ಶಾಲೆಗಳಲ್ಲಿ ಉತ್ಪಾದಿಸುತ್ತಿದೆ ಎಂದು **ಹಿಂದೂ** ಆಂಗ್ಲ ಪತ್ರಿಕೆಯ ಅಂಕಣವೊಂದು ಹೇಳುತ್ತದೆ. ಅದೇನು ಗೊತ್ತೆ? ವೈದ್ಯರುಗಳು.

೨೦೦೪ನೇ ಇಸವಿಯಿಂದ ಈಚೆಗೆ ಇಪ್ಪತ್ತಕ್ಕೂ ಹೆಚ್ಚು ಚೀನಾದ ವೈದ್ಯಕೀಯ ಕಾಲೇಜುಗಳು ಭಾರತದಿಂದ ಬರುವ ವೈದ್ಯಕೀಯ ವಿದ್ಯಾರ್ಥಿಗಳನ್ನು ಭರ್ತಿಮಾಡಿಕೊಳ್ಳಲು ಸ್ಪರ್ಧೆಯನ್ನೇ ನಡೆಸುತ್ತಿವೆ. ಹಾಗೆಯೇ ತಮ್ಮ ತಾಯ್ನಾಡಿನಲ್ಲಿ ವೈದ್ಯಕೀಯ ಶಿಕ್ಷಣದ ಅವಕಾಶದಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ಚೀನಾ ಕನಸುಗಳನ್ನು ಮಾರುವ ಕೇಂದ್ರವಾಗಿ ಪರಿಣಮಿಸಿದೆ.

ಚೀನಾದಲ್ಲಿ ವೈದ್ಯಕೀಯ ಶಿಕ್ಷಣದ ವೆಚ್ಚ ವರ್ಷಕ್ಕೆ ಎರಡರಿಂದ ಮೂರು ಸಾವಿರ ಡಾಲರುಗಳು ಮಾತ್ರ. ಊಟವಸತಿಗಳ ಖರ್ಚು ಮತ್ತೊಂದು ಸಾವಿರ ಡಾಲರ್. ಭಾರತದಲ್ಲಿ ಕಾಲೇಜುಗಳಿಗೆ ಡೊನೇಷನ್ ಎಂದೇ ೩೦-೪೦ ಲಕ್ಷ ರೂಪಾಯಿಗಳನ್ನು ತೆರಬೇಕಾಗಿರುವುದರಿಂದ, ಇದು ಅದಕ್ಕಿಂತ ಕಡಿಮೆಯೇ ಎಂದು ಭಾರತೀಯ ವಿದ್ಯಾರ್ಥಿಗಳ ಅಭಿಪ್ರಾಯ.

ಚಂಡೀಘರದಿಂದ ಚೀನಾದೇಶಕ್ಕೆ ವೈದ್ಯಕೀಯ ಅಧ್ಯಯನ ಮಾಡಲು ಹೋದ ಮನ್‌ಪ್ರೀತ್ ಕೌರ್ ಎಂಬ ವಿದ್ಯಾರ್ಥಿನಿ ಹೀಗೆ ಹೇಳುತ್ತಾರೆ: "ಭಾರತದಲ್ಲಿ ಎಲ್ಲೆಲ್ಲೂ ಅದೆಷ್ಟು ಭ್ರಷ್ಟಾಚಾರ! ಪ್ರವೇಶ ಪರೀಕ್ಷೆಗೆ ಮೊದಲೇ ಅಲ್ಲಿ ಎಲ್ಲ ಸೀಟುಗಳನ್ನೂ ವಂಚನೆಯಿಂದ ಭರ್ತಿಮಾಡಿರುತ್ತಾರೆ. ಪರಿಶ್ರಮ ವಹಿಸಿ ಅಧ್ಯಯನ ಮಾಡಿದರೂ ನಮಗೆ ಅಲ್ಲಿ ಸೀಟು ಸಿಕ್ಕುವುದೇ ಇಲ್ಲ."

ಟಿ.ಎಂ.ಯು. ಎನ್ನುವ ಒಂದೇ ವಿಶ್ವವಿದ್ಯಾನಿಲಯದಲ್ಲಿ ೨೩೦ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಆ ವಿಶ್ವವಿದ್ಯಾನಿಲಯಗಳಿಗೆ ಭಾರತೀಯರು ಕೊಡುವ ಹಣ ವರಮಾನವನ್ನು ಹೆಚ್ಚಿಸಿಕೊಳ್ಳುವ ಒಂದು ವಿಧಾನವಾಗಿದೆ. ಹೀಗಾಗಿ ಚೀನಾದೇಶಕ್ಕೂ ನಮ್ಮ ವಿದ್ಯಾರ್ಥಿಗಳಿಗೂ ಇಬ್ಬರಿಗೂ ಅನುಕೂಲವಾಗಿದೆ.

ಆದರೆ ಅಲ್ಲಿನ ವೈದ್ಯಕೀಯ ಶಿಕ್ಷಣದ ಗುಣಮಟ್ಟದ ಬಗೆಗೂ ಶಂಕೆಗಳಿವೆ. ಜೊತೆಗೆ ಅಲ್ಲಿ ಇಂಗ್ಲಿಷ್ ಭಾಷೆಯ ಪರಿಜ್ಞಾನ ಬಹಳ ಕಡಿಮೆ. ಅದಲ್ಲದೆ, ಭಾರತೀಯ ವಿದ್ಯಾರ್ಥಿಗಳು ಚೀನೀ ಭಾಷೆಯನ್ನು ಕಲಿಯುವುದು ಕಡ್ಡಾಯ.

ಪುರಾತನ ಭಾರತದಲ್ಲಿ ತಕ್ಷಶಿಲಾ, ನಲಂದಾ, ಕಾಂಚಿ ಮುಂತಾದ ಕಡೆ ಇದ್ದ ವಿಶ್ವವಿದ್ಯಾನಿಲಯಗಳು ಅತ್ಯಂತ ಶ್ರೇಷ್ಠ ಶೈಕ್ಷಣಿಕ ಗುಣಮಟ್ಟಕ್ಕೆ ಮತ್ತು ಅಲ್ಲಿನ ವಿದ್ವಾಂಸರ ಪ್ರಗಾಢ ಜ್ಞಾನಕ್ಕೆ ಇಡೀ ಪ್ರಪಂಚದಲ್ಲಿಯೇ ಹೆಸರು ಪಡೆದಿದ್ದವು. ದೇಶವಿದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿ ಬಂದು ವಿದ್ಯಾಭ್ಯಾಸ ಮಾಡಲು ಹಾತೊರೆಯುತ್ತಿದ್ದರು.

ಆದರೆ ಈಗ? ಮೌಲ್ಯಹೀನ ಶಿಕ್ಷಣ, ಭ್ರಷ್ಟಾಚಾರದಿಂದ ತುಂಬಿ ಹೋದ ಆಡಳಿತ ವ್ಯವಸ್ಥೆ, ಕೇವಲ ವಾಣಿಜ್ಯದೃಷ್ಟಿಯಿಂದ ನಡೆಯುವ ಶಿಕ್ಷಣ ಸಂಸ್ಥೆಗಳು, ರಾಜಕೀಯ ಪ್ರೇರಿತ ಮೀಸಲಾತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಗುವ ಅನ್ಯಾಯ – ಇವುಗಳಿಂದ ಬೇಸತ್ತ ವಿದ್ಯಾರ್ಥಿಗಳು ಬೇರೆ ದೇಶಗಳಿಗೆ ಹೋಗದೆ ಬೇರೆ ಯಾವ ಮಾರ್ಗ ತಾನೆ ಇದೆ? ✪

## ಅಸಹಿಷ್ಣು ಭಾರತ

ಭಾರತ ಅತ್ಯಂತ ಪುರಾತನ ರಾಷ್ಟ್ರ. ಅದರ ನಾಗರಿಕತೆಯ ಕಾಲವನ್ನು ಅಳೆದವರಿಲ್ಲ, ಅದರ ಉಗಮವನ್ನು ಕಂಡುಹಿಡಿದವರೂ ಇಲ್ಲ. ಅಂತಹ ಸನಾತನ ಭಾರತ ಇಂದಿಗೂ ಜೀವಂತ. ಇದಕ್ಕೆ ಕಾರಣ ಇಲ್ಲಿನ ಸಂಸ್ಕೃತಿಯ ಸಹಿಷ್ಣುತೆಯ ಮನೋಭಾವ ಮತ್ತು ವಿಶ್ವಸಾಮರಸ್ಯದ ದೃಷ್ಟಿ. ಭಾರತದ ಚಿರಂತನತೆಗೆ ಈ ಸಾರ್ವಕಾಲಿಕ ಮತ್ತು ಸಾರ್ವಭೌಮಿಕ ಮೌಲ್ಯಗಳೇ ಮೂಲ ಅಡಿಪಾಯಗಳು.

ಆದರೆ ಇತ್ತೀಚಿನ ದಿನಗಳಲ್ಲಿ, ಈ ಸಹಿಷ್ಣುತೆಯ ಮನೋಭಾವಕ್ಕೆ ಧಕ್ಕೆ ಬಂದಿದೆ. **ಜಾಗತೀಕರಣ** ಮತ್ತು **ಉದಾರೀಕರಣಗಳು** ಕೇವಲ ವಾಣಿಜ್ಯ ವ್ಯವಹಾರಗಳಿಗೆ ಮಾತ್ರ ಸೀಮಿತವಾಗಿವೆ ಎಂದು ತೋರುತ್ತದೆ. ಸಂಪರ್ಕಮಾಧ್ಯಮಗಳ ನೆರವಿನಿಂದ ಪ್ರಪಂಚ ಒಂದು ದೊಡ್ಡ ಹಳ್ಳಿಯಾಗಿರುವ ಇಂತಹ ಆಧುನಿಕ ಕಾಲಘಟ್ಟದಲ್ಲಿಯೂ ಕೂಡ ಭಾರತದ ಅನೇಕ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಮುಖಂಡರ ಮನಸ್ಸು ಹಿಂದೆಂದಿಗಿಂತ ಹೆಚ್ಚು ಸಂಕುಚಿತವೂ ಪ್ರಗತಿ ವಿರೋಧಕವೂ ಆಗಿರುವುದು ಹಗಲಿನ ಬೆಳಕಿನಷ್ಟೆ ಸ್ಪಷ್ಟವಾಗಿ ಕಾಣಬರುತ್ತಿದೆ. ಇತ್ತೀಚಿನ ಕೆಲವು ಘಟನೆಗಳು ಅದಕ್ಕೆ ಪುಷ್ಟಿಯನ್ನು ಕೊಟ್ಟಿರುವುದು ಮಾತ್ರವಲ್ಲ, ಈ ಬಗೆಯ ಬೌದ್ಧಿಕ ಮತ್ತು ಮಾನಸಿಕ ದಿವಾಳಿತನದ ಕರಾಳ ಪ್ರಭಾವವು ಅಕ್ಟೋಪಸ್‌ನಂತೆ ಹಲವಾರು ರಂಗಗಳಲ್ಲಿ ತನ್ನ ಕಬಂಧ ಬಾಹುಗಳನ್ನು ಚಾಚಿರುವುದನ್ನು ಎತ್ತಿತೋರಿಸುತ್ತಿವೆ.

ಕ್ಷುಲ್ಲಕ ಕಾರಣಗಳಿಗಾಗಿ, ಒಂದು ನಿರ್ದಿಷ್ಟ ಗುಂಪು ವಿರೋಧಮಾಡುತ್ತದೆ ಎನ್ನುವ ಸಲುವಾಗಿ ಒಂದು ಪುಸ್ತಕ, ಇನ್ನೊಂದು ಚಲನಚಿತ್ರ, ಮತ್ತೊಂದು ಕಲಾಕೃತಿ—ಇವುಗಳ ಮಾರಾಟವನ್ನೋ ಪ್ರದರ್ಶನವನ್ನೋ ಕಾನೂನು ಬಾಹಿರವೆಂದು ಘೋಷಿಸುವುದು; ಸಮಾಜದ ಒಂದು ವರ್ಗದವರನ್ನು ತುಷ್ಟಿಗೊಳಿಸಲು ಇತರ ವರ್ಗದವರ ನ್ಯಾಯಯುತ ಹಕ್ಕುಗಳನ್ನು ಕಿತ್ತುಕೊಳ್ಳುವುದು; ಒಂದು ವರ್ಗದವರನ್ನು ಅವರು ಚುನಾವಣೆಯಲ್ಲಿ ಒಟ್ಟಾಗಿ ಮತ ಹಾಕುತ್ತಾರೆಂಬ ಒಂದೇ ಕಾರಣಕ್ಕೆ ಅಸಂವಿಧಾನಕವಾಗಿ ಓಲೈಸುತ್ತ ಹೋಗುವುದು—ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಅಧಿಕಾರವನ್ನು ಭದ್ರಮಾಡಿಕೊಳ್ಳಲು ನಡೆಸುತ್ತಿರುವ ಈ ಬಗೆಯ ರಾಷ್ಟ್ರದ್ರೋಹಿ ಕೃತ್ಯಗಳು ಭಾರತವನ್ನು ಒಂದು ಅಸಹಿಷ್ಣು ಮತ್ತು ಪ್ರಗತಿವಿರೋಧಿ ರಾಷ್ಟ್ರವನ್ನಾಗಿ ಜಾಗತಿಕ ರಂಗದಲ್ಲಿ ಪ್ರಸ್ತುತಪಡಿಸಿವೆ.

ಇಲ್ಲಿನ ಹಲವಾರು ಧರ್ಮಗಳು, ನಂಬಿಕೆಗಳು ನೂರಾರು ವರ್ಷಗಳಿಂದ ಬೆಳೆದುಕೊಂಡು, ಉಳಿದುಕೊಂಡು ಬಂದವು. ಯಾರದೋ ಒಂದು ಪುಸ್ತಕ, ಇನ್ನಾರದೋ ಒಂದು ಕಲಾಚಿತ್ರ, ಮತ್ತಾರದೋ ಒಂದು ಚಲನಚಿತ್ರ ಅಥವಾ ಒಬ್ಬ ವಿದ್ವಾಂಸನ ಅಥವಾ ರಾಜಕಾರಣಿಯ ಹೇಳಿಕೆ ಅವುಗಳಿಗೆ ಧಕ್ಕೆಯನ್ನು ತರುತ್ತದೆಯೇ? ಹಾಗೆ ತರುವುದಾದರೆ, ಅಂತಹ ನಂಬಿಕೆ ಅಥವಾ ಸಂಪ್ರದಾಯ ತನ್ನ ಔಚಿತ್ಯವನ್ನು ಕಳೆದುಕೊಂಡಿದೆ ಎಂದರ್ಥವಲ್ಲವೆ? ಒಂದು ನಂಬಿಕೆಯನ್ನು ವಿರೋಧಿಸುವ ಯಾವುದೆ ಕಾರ್ಯವನ್ನು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರೋಧವಾಗಿ ಸದೆಬಡೆಯುವುದರಿಂದ ಆ ನಂಬಿಕೆಗೆ ಬೆಲೆ ಬರುತ್ತದೆಯೇ?

ಚಾರ್ವಾಕರಂತಹ ಭೋಗವಾದಿಗಳು, ಬೌದ್ಧ ಮತ್ತು ಜೈನ ಧರ್ಮಗಳಂತಹ ನಿರೀಶ್ವರವಾದಿಗಳು, ತಾತ್ತ್ವಿಕ ಭಿನ್ನಾಭಿಪ್ರಾಯಗಳನ್ನು ಹೊಂದಿರುವ ನೂರಾರು ಪಂಗಡಗಳು—ಇವುಗಳೆಲ್ಲದಕ್ಕೂ ತವರುಮನೆಯಾದ **ಭಾರತ ಅಸಹಿಷ್ಣುವಾಗುತ್ತಿದೆಯೇ?** ಹಾಗಾದರೆ ಅದು ತನ್ನ ಚಿರಂತನತೆಯನ್ನು ಉಳಿಸಿಕೊಳ್ಳಬಲ್ಲುದೆ? ✪